ಇ) ಪ್ರತಿಯೊಂದು ಮಗುವೂ ಶಾಲೆಗೆ ಪ್ರವೇಶವನ್ನು ಹೊಂದುವುದು, ಶಾಲೆಗೆ ಹಾಜರಾಗುವುದು ಮತ್ತು ಎಲಿಮೆಂಟರಿ ಶಿಕ್ಷಣವನ್ನು ಪೂರೈಸುವುದನ್ನು ಉಸ್ತುವಾರಿ ಮಾಡುವುದನ್ನು ಖಾತರಿಪಡಿಸಿಕೊಳ್ಳಬೇಕು.
ಎಫ್) ಪಾಠಶಾಲೆಗೆ ಬೇಕಾದ ಕಟ್ಟಡ, ಶಿಕ್ಷಕ ವೃಂದ, ಕಲಿಕೆ ಸಾಮಗ್ರಿಗಳೇ ಮೊದಲಾದ ಮೂಲ ಸೌಕರ್ಯಗಳನ್ನು ಶಾಲೆಗಳಿಗೆ ಒದಗಿಸಬೇಕು.
ಕೆ) ವಲಸೆ ಹೋಗುವ ಕುಟುಂಬಗಳ ಮಕ್ಕಳು ಶಾಲೆಗೆ ಪ್ರವೇಶ ಪಡೆಯುವುದನ್ನು ಖಾತರಿಪಡಿಸಿಕೊಳ್ಳಬೇಕು.
ಎಲ್) ತನ್ನ ಭೌಗೋಳಿಕ ಪ್ರದೇಶದಲ್ಲಿ ಬರುವ ಎಲ್ಲಾ ಶಾಲೆಗಳ ಕೆಲಸಗಳನ್ನು ಉಸ್ತುವಾರಿ ಮಾಡಬೇಕು.
ಎಮ್) ಶಾಲಾ ಶೈಕ್ಷಣಿಕ ಕ್ಯಾಲೆಂಡರ್ / ಪಂಚಾಂಗವನ್ನು ನಿರ್ಧರಿಸಬೇಕು.

**ಸೆಕ್ಷನ್ 10 : ಪೋಷಕರು ಮತ್ತು ತಂದೆ ತಾಯಿಯರ ಕರ್ತವ್ಯ**
ತಮ್ಮ ಮಕ್ಕಳನ್ನು ಅಥವಾ ತಮ್ಮ ಸಂರಕ್ಷಣೆಯಲ್ಲಿರುವ ಎಲ್ಲಾ ಮಕ್ಕಳನ್ನು ತನ್ನ ನೆರೆಹೊರೆಯಲ್ಲಿರಬಹುದಾದ ಎಲಿಮೆಂಟರಿ ಶಿಕ್ಷಣಕ್ಕಾಗಿ ಶಾಲೆಗೆ ದಾಖಲಿಸುವುದು ಎಲ್ಲ ತಂದೆ ತಾಯಿಯರು ಮತ್ತು ಪೋಷಕರ ಕರ್ತವ್ಯ.

**ಸೆಕ್ಷನ್ 11 : ಸಮುಚಿತ ಸರಕಾರಕ್ಕೆ ಪ್ರಾಥಮಿಕ ಪೂರ್ವ ಶಿಕ್ಷಣ ವ್ಯವಸ್ಥೆ ಮಾಡುವ ಜವಾಬ್ದಾರಿ**
3 ವರ್ಷವನ್ನು ದಾಟಿದ ಎಲ್ಲ ಮಕ್ಕಳನ್ನು ಮುಂದೆ ಎಲಿಮೆಂಟರಿ ಶಿಕ್ಷಣಕ್ಕೆ ಸೇರಿಸಲು ತಯಾರು ಮಾಡುವ ಉದ್ದೇಶದಿಂದ. ಅವರಿಗೆ ಆರಂಭಿಕ ಬಾಲ್ಯ ಪೋಷಣೆ,ಪ್ರಾಥಮಿಕ ಪೂರ್ವ ಶಿಕ್ಷಣವನ್ನು ಎಲ್ಲ ಮಕ್ಕಳಿಗೆ ಅವರು 6 ವರ್ಷವನ್ನು ದಾಟುವವರೆಗೆ ಸೂಕ್ತ ಸರಕಾರಗಳು ಉಚಿತವಾಗಿ ಶಾಲಾ ಪೂರ್ವ ಶಿಕ್ಷಣದ ವ್ಯವಸ್ಥೆಗಳ ಮೂಲಕ ಮಾಡಿಕೊಡಬಹುದು.

**ಸೆಕ್ಷನ್ 12 : ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಲು ಶಾಲೆಗಿರುವ ಜವಾಬ್ದಾರಿಯ ವ್ಯಾಪ್ತಿ**
ಬಿ) ಸೆಕ್ಷನ್ 2 ಉಪ-ಕ್ಲಾಸ್ (n)ರಲ್ಲಿ ನಿರ್ದಿಷ್ಟಪಡಿಸಿರುವಂತೆ, ಪ್ರತೀ ವರ್ಷ ತನಗೆ ಸಿಗುವ ದೇಣಿಗೆ / ಗ್ರ್ಯಾಂಟ್ / ಏಯ್ಡ್‌ನ ಪ್ರಮಾಣದಂತೆ ತನ್ನಲ್ಲಿ ಪ್ರವೇಶ ಪಡೆಯುವ ಒಟ್ಟು ಮಕ್ಕಳಲ್ಲಿ ಕನಿಷ್ಠ ಪ್ರತಿ ಶತ 25 ಭಾಗದಷ್ಟು ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸಬೇಕು.
ಸಿ) ಸೆಕ್ಷನ್ 2 ಕ್ಲಾಸ್ (n)ರ ಪ್ರಕಾರ ಉಪ ಕ್ಲಾಸ್ (iii) ಮತ್ತು (iv)ರಲ್ಲಿ ನಿರ್ದಿಷ್ಟಪಡಿಸಿರುವಂತೆ, ತನ್ನ ನೆರೆಹೊರೆಯವರಿಗೆ ಕನಿಷ್ಠ ಪ್ರತಿಶತ 25ರಷ್ಟು ದುರ್ಬಲ ವರ್ಗಗಳು ಮತ್ತು ಪ್ರತಿಕೂಲ ಪರಿಸ್ಥಿತಿಯಲ್ಲಿರುವ ವರ್ಗಗಳ ಮಕ್ಕಳನ್ನು 1ನೇ ತರಗತಿಗೆ ಸೇರಿಸಿಕೊಂಡು ಅವರಿಗೆ ಪ್ರಾಥಮಿಕ ಶಿಕ್ಷಣ ಪೂರೈಸುವವರೆಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸಬೇಕು.

**ಸೆಕ್ಷನ್ 13 : ಶಾಲೆಗೆ ಪ್ರವೇಶ ಪಡೆಯಲು ಕ್ಯಾಪಿಟೇಶನ್ ಶುಲ್ಕ ಮತ್ತು ಪ್ರವೇಶ ಪರೀಕ್ಷೆ ಇರಬಾರದು.**
ಸೆಕ್ಷನ್ 13-2ರಲ್ಲಿ (a) ಕ್ಯಾಪಿಟೇಶನ್ ಶುಲ್ಕವನ್ನು ತೆಗೆದುಕೊಂಡಿದ್ದೇ ಆದಲ್ಲಿ ಆ ಶುಲ್ಕದ 10ರಷ್ಟು ಪ್ರಮಾಣದಲ್ಲಿ ದಂಡವನ್ನು ತೆರಬೇಕಾಗುತ್ತದೆ.
(ಬಿ) ಮಕ್ಕಳನ್ನು ಪ್ರವೇಶ ಪರೀಕ್ಷೆಯಂತಹದಕ್ಕೆ ಒಳಪಡಿಸಿದ್ದೇ ಆದಲ್ಲಿ ಮೊದಲ ಬಾರಿ ರೂ. 25,000 ಮತ್ತು ಅದನ್ನು ಮತ್ತೆ ಮತ್ತೆ ಮೀರಿದಲ್ಲಿ ಪ್ರತೀ ಬಾರಿ ರೂ. 50,000ವನ್ನು ತೆರಬೇಕಾಗುತ್ತದೆ.

**ಸೆಕ್ಷನ್ 14 : ಪ್ರವೇಶ ಪಡೆಯಲು ವಯಸ್ಸಿನ ಪುರಾವೆ :**
(2) ಮಗುವಿನ ವಯಸ್ಸನ್ನು ನಿರ್ಧರಿಸುವ ಪ್ರಮಾಣ ಪತ್ರಗಳು ಇಲ್ಲವೆಂಬ ಒಂದೇ ಕಾರಣಕ್ಕೆ ಯಾವುದೇ ಮಗುವಿಗೆ ಶಾಲಾ ಪ್ರವೇಶವನ್ನು ನಿರಾಕರಿಸುವಂತಿಲ್ಲ.

**ಸೆಕ್ಷನ್ 16 : ನಪಾಸು ಮಾಡುವ ಮತ್ತು ಶಾಲೆಯಿಂದ ಹೊರಹಾಕುವುದಕ್ಕೆ ನಿಷೇಧ :**
ಯಾವುದೇ ಮಗುವನ್ನು ಯಾವುದೇ ಕಾರಣಕ್ಕೂ ಯಾವುದೇ ತರಗತಿಯಲ್ಲಿ ನಪಾಸು ಮಾಡಿ ಉಳಿಸಿಕೊಳ್ಳುವಂತಿಲ್ಲ ಮತ್ತು ಎಲಿಮೆಂಟರಿ ಶಿಕ್ಷಣ ಪೂರೈಸುವ ತನಕ ಶಾಲೆಯಿಂದ ಹೊರಹಾಕುವಂತಿಲ್ಲ.

**ಸೆಕ್ಷನ್ 17 : ದೈಹಿಕ ಶಿಕ್ಷೆ ಮತ್ತು ಮಾನಸಿಕ ಕ್ಷೋಭೆ ಮಾಡುವುದಕ್ಕೆ ನಿಷೇಧ**
1) ಯಾವುದೇ ಮಗುವನ್ನು ದೈಹಿಕ ಶಿಕ್ಷೆ ಅಥವಾ ಮಾನಸಿಕ ಕ್ಷೋಭೆಗೆ ಗುರಿ ಮಾಡಬಾರದು.

**ಸೆಕ್ಷನ್ 19 : ಶಾಲೆಗಳನ್ನು ನಡೆಸಲು ಕನಿಷ್ಠ ಮಾಪಕಗಳು ಮತ್ತು ನಿಯಮಗಳು**
2) ಈ ಕಾಯಿದೆಯು ಜಾರಿಯಾಗುವುದಕ್ಕೆ ಮೊದಲೇ ಯಾರಾದರೂ ಶಾಲೆಗಳನ್ನು ಆರಂಭಿಸಿದಲ್ಲಿ, ಅಂತಹ ಶಾಲೆಗಳು ಈ ಕಾಯಿದೆ ಜಾರಿಗೆ ಬಂದ ಮೂರು ವರ್ಷಗಳೊಳಗೆ ತಮ್ಮದೇ ಖರ್ಚಿನಲ್ಲಿ ಈ ಕಾಯಿದೆಯ ಶೆಡ್ಯೂಲಿನಲ್ಲಿ ಸೂಚಿಸಿರುವ ನಿಯಮಗಳು, ಮಾಪಕಗಳಿಗೆ ಸೂಕ್ತವಾಗಿ ಶಾಲೆಗಳಲ್ಲಿ ವ್ಯವಸ್ಥೆಗಳನ್ನು ಮಾಡಬೇಕು.
4) ಉಪ ಸೆಕ್ಷನ್ (3)ರಂತೆ ಯಾವುದಾದರೂ ಶಾಲೆಗೆ ಮನ್ನಣೆಯನ್ನು ಹಿಂದಕ್ಕೆ ತೆಗೆದುಕೊಂಡ ದಿನದಿಂದ ಅಂತಹ ಶಾಲೆಗಳು ಮುಂದುವರಿಯಬಾರದು.
5) ಹೀಗೆ ಮನ್ನಣೆಯನ್ನು ಹಿಂದಕ್ಕೆ ತೆಗೆದುಕೊಂಡ ಮೇಲೂ ಯಾರಾದರೂ ಶಾಲೆಯನ್ನು ಮುಂದುವರಿಸಿದರೆ ಅವರಿಗೆ ರೂ. ಒಂದು ಲಕ್ಷದ ತನಕ ಜುಲ್ಮಾನೆಯನ್ನು ವಿಧಿಸಬಹುದು ಮತ್ತು ಅನಂತರವೂ ಶಾಲೆಯನ್ನು ನಡೆಸಿದರೆ ನಿಷೇಧವನ್ನು ಮುರಿದು ಮುಂದುವರೆಯುವ ಪ್ರತಿ ದಿನಕ್ಕೆ ರೂ. 10,000 ದಂಡವನ್ನು ವಿಧಿಸಬಹುದು.

**ಸೆಕ್ಷನ್ 23 : ಶಿಕ್ಷಕರ ನೇಮಕಕ್ಕೆ ಶೈಕ್ಷಣಿಕ ಸಾಮರ್ಥ್ಯಗಳು ಮತ್ತು ಶಿಕ್ಷಕರ ಸೇವಾ ನಿಯಮಗಳು ಮತ್ತು ಶರತ್ತುಗಳು**
1) ಕೇಂದ್ರ ಸರಕಾರವು ಪ್ರಕಟಣೆ ಹೊರಡಿಸಿ ಅಧಿಕೃತಗೊಳಿಸುವ ಶೈಕ್ಷಣಿಕ ಪ್ರಾಧಿಕಾರವು ನಿಗದಿಪಡಿಸುವ ಕನಿಷ್ಠ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಗಳು ಶಿಕ್ಷಕರಾಗಿ ನೇಮಕ ಹೊಂದಲು ಅರ್ಹರಾಗುತ್ತಾರೆ.

**ಸೆಕ್ಷನ್ 24 : 1) ಸೆಕ್ಷನ್ 23ರ ಉಪ ಸೆಕ್ಷನ್ (1)ರಂತೆ ನೇಮಿಸಲ್ಪಟ್ಟ ಶಿಕ್ಷಕರು ಈ ಮುಂದಿನ ಕರ್ತವ್ಯಗಳನ್ನು ನಿರ್ವಹಿಸಬೇಕು.**
(ಎ) ಶಾಲೆಗೆ ತಪ್ಪದೆ ಹಾಜರಾಗುವುದು ಮತ್ತು ಸಮಯ ಪಾಲನೆ ಮಾಡುವುದು
(ಬಿ) ಸೆಕ್ಷನ್ 29ರ ಸಬ್ ಸೆಕ್ಷನ್2ರಲ್ಲಿ ಸೂಚಿಸಿರುವಂತೆ ಶಾಲಾ ಪಠ್ಯವನ್ನು ನಡೆಸಿ ಪೂರ್ತಿಗೊಳಿಸುವುದು.
(ಸಿ) ನಿರ್ದಿಷ್ಟಪಡಿಸಿದ ಸಮಯದೊಳಗೆ ಅಧ್ಯಯನ ವಿಚಾರಗಳನ್ನು ಪೂರ್ಣಗೊಳಿಸುವುದು.
(ಡಿ) ಪ್ರತಿಯೊಬ್ಬ ಮಗುವಿನ ಕಲಿಯುವ ಸಾಮರ್ಥ್ಯವನ್ನು ಪರಿಶೀಲಿಸಿ ಅದರಂತೆ ಅವಶ್ಯಕತೆ ಇರುವ ಹೆಚ್ಚಿನ ಸಹಾಯ ನಿರ್ದೇಶನಗಳನ್ನು ನೀಡುವುದು.
(ಇ) ಪೋಷಕರು ಮತ್ತು ತಂದೆ ತಾಯಿಯರೊಡನೆ ಕ್ರಮಬದ್ಧವಾಗಿ ಸಭೆ ನಡೆಸಿ, ಅವರ ಮಕ್ಕಳು ನಿಯಮಿತವಾಗಿ ಶಾಲೆಗೆ ಹಾಜರಾಗುವ, ಕಲಿಯುವ ಸಾಮರ್ಥ್ಯ, ಕಲಿಯುವುದರಲ್ಲಿ ಮಾಡಿರುವ ಪ್ರಗತಿ ಮತ್ತು ಇನ್ನಿತರ ಸೂಕ್ತವಾದ ಮಾಹಿತಿ ಗಳನ್ನು ಹಂಚಿಕೊಳ್ಳಬೇಕು.
(ಎಫ್) ನಿರ್ದಿಷ್ಟಪಡಿಸಬಹುದಾದ ಇನ್ನಿತರ ಚಟುವಟಿಕೆಗಳು ಮತ್ತು ಕೆಲಸಗಳನ್ನು ಮಾಡುವುದು.
(3) ಶಿಕ್ಷಕರಿಗೆ ಯಾವುದಾದರೂ ನೋವು/ಅಸಮಾಧಾನ ಇದ್ದಲ್ಲಿ ಅದನ್ನು ನಿರ್ದಿಷ್ಟಪಡಿಸಲಾಗುವ ರೀತಿಯಲ್ಲಿ ಪರಿಹರಿಸಿಕೊಳ್ಳಬಹುದು.

**ಸೆಕ್ಷನ್ 25 : ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತ :**
(1) ಈ ಕಾಯಿದೆಯು ಜಾರಿಗೆ ಬಂದ 6 ತಿಂಗಳೊಳಗೆ ಸೂಕ್ತ ಸರಕಾರಗಳು ಮತ್ತು ಸ್ಥಳೀಯ ಸರಕಾರಗಳು ಶೆಡ್ಯೂಲ್‌ನಲ್ಲಿ ಸ್ಪಷ್ಟಪಡಿಸಿ ಸೂಚಿಸಿರುವಂತೆ ಪ್ರತೀ ಶಾಲೆಯಲ್ಲಿ ಶಿಕ್ಷಕ-ವಿದ್ಯಾರ್ಥಿ ಅನುಪಾತವನ್ನು ಖಾತರಿಪಡಿಸಿಕೊಳ್ಳಬೇಕು.
(2) ವಿದ್ಯಾರ್ಥಿ - ಶಿಕ್ಷಕ ಅನುಪಾತವನ್ನು ಉಪಸೆಕ್ಷನ್ (1)ರಂತೆ ಖಾತರಿ ಪಡಿಸಲೋಸುಗ, ಸೆಕ್ಷನ್ 27ರಲ್ಲಿ ಸೂಚಿಸಿರುವಂತೆ ಯಾವುದೇ ಶಿಕ್ಷಕರನ್ನು ಶಾಲೆಯದಲ್ಲದ ಯಾವುದೇ ಕೆಲಸಕ್ಕಾಗಲೀ ಅಥವಾ ಇನ್ನಾವುದೇ ರೀತಿಯ ಶೈಕ್ಷಣಿಕವಲ್ಲದ ಕೆಲಸಗಳಿಗೆ ನೇಮಿಸಿಕೊಳ್ಳಬಾರದು.

**ಸೆಕ್ಷನ್ 27 : ಶಿಕ್ಷಕರನ್ನು ಶೈಕ್ಷಣಿಕವಲ್ಲದ ಕೆಲಸಗಳಿಗೆ ನೇಮಿಸಿಕೊಳ್ಳುವುದಕ್ಕೆ ನಿಷೇಧ**
(3) ಯಾವುದೇ ಶಿಕ್ಷಕರನ್ನು ಶೈಕ್ಷಣಿಕವಲ್ಲದ ಕೆಲಸಗಳಿಗೆ, 10 ವರ್ಷಗಳಿಗೊಮ್ಮೆ ನಡೆಯುವ ಜನಗಣತಿ, ವಿಪತ್ತು ನಿರ್ವಹಣೆ, ಸ್ಥಳೀಯ ಸರಕಾರಗಳು, ರಾಜ್ಯ ವಿಧಾನಸಭೆ ಮತ್ತು ಸಂಸತ್ ಚುನಾವಣೆ ಹೊರತುಪಡಿಸಿ, ಇತರ ಕೆಲಸಗಳಿಗೆ ನೇಮಿಸಬಾರದು.

**ಸೆಕ್ಷನ್ 28 : ಶಿಕ್ಷಕರು ಖಾಸಗೀ ಪಾಠಗಳನ್ನು ಮಾಡುವುದಕ್ಕೆ ನಿಷೇಧ.**
ಯಾವುದೇ ಶಿಕ್ಷಕರು ಖಾಸಗೀ ಪಾಠಗಳನ್ನು ಮಾಡುವುದು ಖಾಸಗೀಯಾಗಿ ಕಲಿಸುವುದರಲ್ಲಿ ನಿರತರಾಗಬಾರದು.

**ಸೆಕ್ಷನ್ 29 : ಪಠ್ಯ ಕ್ರಮ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳು**
1) ಎಲಿಮೆಂಟರಿ ಶಿಕ್ಷಣದ ಪಠ್ಯ ಮತ್ತು ಮೌಲ್ಯಮಾಪನದ ಪ್ರಕ್ರಿಯೆಯನ್ನು ಸರಕಾರ ಅಧೀಕೃತವಾಗಿ ಪ್ರಕಟಿಸಿದ ಶೈಕ್ಷಣಿಕ ಪ್ರಾಧಿಕಾರವು ನಿರ್ಧರಿಸುತ್ತದೆ.
2) ಶೈಕ್ಷಣಿಕ ಪ್ರಾಧಿಕಾರವು ಉಪಸೆಕ್ಷನ್ (1)ರ ಪ್ರಕಾರ ಪಠ್ಯ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳ ವಿಧಿವಿಧಾನಗಳನ್ನು ನಿರ್ಮಿಸುವಾಗ ಈ ಕೆಳಗಿನವುಗಳನ್ನು ಗಣನೆಗೆ ತೆಗೆದುಕೊಳ್ಳಲೇಬೇಕು.
(ಎ) ಸಂವಿಧಾನವು ಎತ್ತಿ ಹಿಡಿದಿರುವ ಮೌಲ್ಯಗಳಿಗೆ ಅನುಗುಣವಾಗಿರಬೇಕು.
(ಬಿ) ಮಕ್ಕಳ ಸರ್ವಾಂಗೀಣ ಅಭಿವೃದ್ಧಿ
(ಸಿ) ಮಕ್ಕಳ ಜ್ಞಾನ, ಸಾಮರ್ಥ್ಯ ಮತ್ತು ನೈಪುಣ್ಯತೆಗಳ ಬೆಳವಣಿಗೆ
(ಡಿ) ಪೂರ್ಣ ಪ್ರಮಾಣದ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳ ಬೆಳವಣಿಗೆ
(ಡಿ) ಪೂರ್ಣ ಪ್ರಮಾಣದ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳ ಬೆಳವಣಿಗೆ
(ಇ) ಮಕ್ಕಳ ಸ್ನೇಹೀ ಮತ್ತು ಮಕ್ಕಳ ಕೇಂದ್ರೀಕೃತ ಮಾದರಿಯಲ್ಲಿ ಚಟುವಟಿಕೆಗಳ ಮೂಲಕ ಪರಿಶೋಧನೆ ಮತ್ತು ಕಂಡುಕೊಳ್ಳುವ ವಿಧಾನದಲ್ಲಿ ಕಲಿಕೆ.
(ಎಫ್) ಬೋಧನಾ ಮಾಧ್ಯಮ ಸಾಧ್ಯವಾದಷ್ಟು ಮಟ್ಟಿಗೆ ಮಕ್ಕಳ ಮಾತೃಭಾಷೆಯಲ್ಲಿಬೇಕು.
(ಜಿ) ಮಕ್ಕಳನ್ನು ಭೀತಿ, ನೋವು, ಮಾನಸಿಕ ಕ್ಷೋಭೆಯಿಂದ ಮುಕ್ತರನ್ನಾಗಿ ಮಾಡುವುದು ಮತ್ತು ಮಕ್ಕಳು ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ವ್ಯಕ್ತಪಡಿಸಲು ಸಹಾಯಮಾಡುವುದು.
(ಎಚ್) ಮಗುವಿನ ಗ್ರಹಿಕೆಯ ಮಟ್ಟ ಮತ್ತು ಅದನ್ನು ಅಳವಡಿಸುವ ಸಾಮರ್ಥ್ಯ ಕುರಿತು ಸಮಗ್ರ ಮತ್ತು ನಿರಂತರ ಮೌಲ್ಯಮಾಪನ.

**ಸೆಕ್ಷನ್ 30 : ಪರೀಕ್ಷೆ ಮತ್ತು ಪೂರೈಸಿದ ಪ್ರಮಾಣ ಪತ್ರ :**
1) ಯಾವುದೇ ಮಗು ಎಲಿಮೆಂಟರಿ ಶಿಕ್ಷಣವನ್ನು ಪೂರ್ಣಗೊಳಿಸುವ ತನಕ ಯಾವುದೇ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾದ ಅವಶ್ಯಕತೆ ಇಲ್ಲ.
2) ಎಲಿಮೆಂಟರಿ ಶಿಕ್ಷಣವನ್ನು ಪೂರೈಸಿದ ಪ್ರತೀ ಮಗುವಿಗೂ ಪೂರ್ವನಿರ್ಧಾರಿತ ರೂಪ ಮತ್ತು ಮಾದರಿಯಲ್ಲಿ ಪ್ರಮಾಣ ಪತ್ರ ನೀಡಬೇಕು.

**ಸೆಕ್ಷನ್ 31 : ಮಕ್ಕಳ ಶಿಕ್ಷಣದ ಹಕ್ಕಿನ ಉಸ್ತುವಾರಿ.**
1) (ಬಿ) ಮಕ್ಕಳ ಹಕ್ಕುಗಳ ಉಚಿತ ಮತ್ತು ಸಾರ್ವತ್ರಿಕ ಶಿಕ್ಷಣದ ಕುರಿತಂತಹ ದೂರಗಳ ವಿಚಾರಣೆ
2) ಮೇಲೆ ಹೇಳಿದ ಆಯೋಗವು ಉಪ ಸೆಕ್ಷನ್ 1ರ ಕ್ಲಾಸ್ (ಸಿ) ಅಡಿಯಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿಗೆ ಸಂಬಂಧಿಸಿದ ಯಾವುದಾದರೂ ವಿಚಾರದ ಬಗ್ಗೆ ತನಿಖೆ ಮಾಡುವಾಗ, ನಿರ್ದಿಷ್ಟವಾದ ಷರತ್ತುಗಳಡಿ ಕೆಲಸ ನಿರ್ವಹಿಸಲು ಸೂಚಿಸಿದ ಪ್ರಾಧಿಕಾರವನ್ನು ನಿರ್ಮಿಸಬೇಕು.

**ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯಿದೆಯಲ್ಲಿ 7 ಅಧ್ಯಾಯಗಳಿದ್ದು 37 ಸೆಕ್ಷನ್‌ಗಳಲ್ಲಿ ವಿವರಿಸಲಾಗಿದೆ. ಇಲ್ಲಿ ಕಾಯಿದೆಯ ಕೆಲವು ಮುಖ್ಯವಾದ ಅಂಶಗಳನ್ನು ಮಾತ್ರ ಪ್ರಕಟಿಸಲಾಗಿದೆ. ಇದರಲ್ಲಿರುವ ಕನ್ನಡ ಅವತರಣಿಕೆ ಕೇವಲ ಕಾಯಿದೆಯ ಅನುವಾದವಷ್ಟೇ. ಅಧಿಕೃತ ಉಲ್ಲೇಖನಗಳನ್ನು ಮೂಲ ಕಾಯಿದೆಯಿಂದಲೇ ನೋಡಬೇಕಾಗಿ ವಿನಂತಿ.**

# ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯಿದೆ – 2009ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ

# ಶಿಕ್ಷಣ ಹಕ್ಕು ಕೋಶ




**ಪ್ರಕಟಣೆ :**
**ಗುಣಮಟ್ಟದ ಶಿಕ್ಷಣಕ್ಕಾಗಿ ಮಕ್ಕಳ ಸ್ನೇಹಿ ಸಮಾಜ ನಿರ್ಮಾಣ**
**ಪಡಿ**
"ಗಣೇಶ" ಕುಲಾಸೋ ಆಸ್ಪತ್ರೆಯ ಬಳಿ,
2ನೇ ಅಡ್ಡ ರಸ್ತೆ, ಬೆಂದೂರ್‌ವೆಲ್,
ಮಂಗಳೂರು – 2. ದೂರವಾಣಿ : 0824 – 2439895
**website : www.padivalored.com**

ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡುವಂತೆ ಭಾರತದ ಸಂವಿಧಾನವು ದೇಶದ ಸರಕಾರಕ್ಕೆ ಜವಾಬ್ದಾರರನ್ನಾಗಿಸಿದೆ, ಆದರೆ ಈ ತನಕವೂ ಇದನ್ನು ಸಾಧಿಸಲಾಗದ ಭಾರತದ ಸರಕಾರಗಳು ಇದೀಗ ಕೇಂದ್ರ ಸರಕಾರವು ಶಿಕ್ಷಣವನ್ನು ಮಕ್ಕಳ ಮೂಲಭೂತ ಹಕ್ಕನ್ನಾಗಿಸಿ ಉಚಿತವಾಗಿ ಮತ್ತು ಕಡ್ಡಾಯವಾಗಿ ನೀಡಲು ಶಿಕ್ಷಣ ಹಕ್ಕು ಕಾಯಿದೆ 2009 ಜಾರಿಗೆ ಗೊಳಿಸಿದುದರಿಂದ ಅನೇಕ ಬಾಲಕಾರ್ಮಿಕ ಹಾಗೂ ಶಿಕ್ಷಣ ವಂಚಿತ ಮಕ್ಕಳ ಪಾಲಿಗೆ ವರದಾನವಾಗಿದೆ.

ಶಿಕ್ಷಣದ ಸಾರ್ವತ್ರೀಕರಣ ಸಾಧಿಸಲು ಸರ್ವ ಶಿಕ್ಷಣ ಅಭಿಯಾನ ಯೋಜನೆಯನ್ನು 2001–2002ರಲ್ಲಿ ಪ್ರಾರಂಭಿಸಲಾಗಿತ್ತು. 6ರಿಂದ 14ವರ್ಷದ ಎಲ್ಲಾ ಮಕ್ಕಳನ್ನು ಶಾಲೆಯಲ್ಲಿ ದಾಖಲಿಸುವ ಮತ್ತು ಉಳಿಸುವ ಪ್ರಯತ್ನಕ್ಕೆ ಈ ಮೂಲಕ ಪ್ರಯತ್ನ ಪಟ್ಟರೂ ನಮ್ಮ ಶಾಲೆಗಳಲ್ಲಿನ ಶಿಕ್ಷಕರಲ್ಲಿ ಭಾವನಾತ್ಮಕ ಸುಧಾರಣೆಗಳ ಫಲಶ್ರುತಿಯಾಗಿ ತರಗತಿ ಕೋಣೆಯಲ್ಲಿ ಮಗು ಸ್ನೇಹಿ ವಾತಾವರಣ ಕಾಣಬಹುದಾಗಿದ್ದು 2009ರಲ್ಲಿ ಜಾರಿಯಾದ ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣ ಹಕ್ಕು ಕಾಯಿದೆಯೂ ಕೂಡಾ ಪರಿಪೂರ್ಣವಾಗಿ ತಳಮಟ್ಟದಲ್ಲಿ ಅನುಷ್ಟಾನಗೊಳ್ಳಬೇಕಾದರೆ ಸಮುದಾಯದ ಭಾಗವಹಿಸುವಿಕೆ ಬಹಳ ಅಗತ್ಯ.

ದುರ್ಬಲ ವರ್ಗ ಹಾಗೂ ಪ್ರತಿಕೂಲ ಗುಂಪುಗಳಿಗೆ ಸೇರಿರುವ ಮಕ್ಕಳು ಯಾವುದೇ ಕಾರಣಕ್ಕೂ ತಾರತಮ್ಯಗಳಿಗೆ ಒಳಗಾಗದಂತೆ ಮತ್ತು ಪ್ರಾಥಮಿಕ ಶಿಕ್ಷಣವನ್ನು ಪಡೆಯುವುದರಿಂದ ಅಥವಾ ಪೂರ್ತಿಗೊಳಿಸುವುದರಿಂದ ವಂಚಿತರಾಗದಂತೆ ನೋಡಿಕೊಳ್ಳುವ ಉದ್ದೇಶದಿಂದ ಹಾಗೂ ಪೋಷಕರ ಅನುಕೂಲಕ್ಕಾಗಿ ಶಿಕ್ಷಣ ಇಲಾಖೆಯು ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರತ್ಯೇಕವಾದ ಸ್ಥಳೀಯ ಪ್ರಾಧಿಕಾರವನ್ನು ರಚಿಸುವುದರೊಂದಿಗೆ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ ಮತ್ತು ಸಂಪರ್ಕವಾಗಿ ಕಾರ್ಯ ನಿರ್ವಹಿಸಬೇಕಾದ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಎಲ್ಲಾ ಮಕ್ಕಳು ಶಿಕ್ಷಣದ ಹಕ್ಕಿನ ಪೂರ್ಣ ಪ್ರಮಾಣದ ಪ್ರಯೋಜನ ಪಡೆಯುವ ಉದ್ದೇಶದಿಂದ ವಲಯ ಮಟ್ಟದಲ್ಲಿ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆಯ ಕೋಶ ರಚನೆಯಾಗಬೇಕಾಗಿದೆ.

ಈ ಹಿನ್ನಲೆಯಲ್ಲಿ ಪಡಿ ಸಂಸ್ಥೆಯು ಶಿಕ್ಷಣ ಹಕ್ಕು ಕಾಯಿದೆಯ ಕೋಶವನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಅರಂಬಿಸುವ ಉದ್ದೇಶದೊಂದಿಗೆ ಕಾರ್ಯತತ್ಪರವಾಗಿದೆ. ಶಿಕ್ಷಣ ಹಕ್ಕು ಕೋಶವು ಸರಕಾರಿ ನೆಲೆಯಲ್ಲಿ ಪ್ರತಿ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿದ್ದು ಅದನ್ನು ಎಲ್ಲಾ ತಾಲೂಕುಗಳಿಗೂ ವಿಸ್ತರಿಸುವ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಸಂಸ್ಥೆಯಾಗಿ ರೂಪಿಸುವ ಹಂಬಲದೊಂದಿಗೆ ಇಲಾಖಾ ಸಹಭಾಗಿತ್ವದಲ್ಲಿ ಮುನ್ನುಡಿಯನ್ನಿಟ್ಟಿದೆ.

## ಮಕ್ಕಳ ಶಿಕ್ಷಣ ಹಕ್ಕು ಕಾಯಿದೆಯ ಕೋಶದ ಅಗತ್ಯತೆ

1. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನ ಕಾಯಿದೆಯ ಪ್ರಕಾರ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ
2. ದುರ್ಬಲ ವರ್ಗ ಹಾಗೂ ಪ್ರತಿಕೂಲ ಗುಂಪುಗಳಿಗೆ ಸೇರಿರುವ ಮಕ್ಕಳು ಯಾವುದೇ ಕಾರಣಕ್ಕೂ ತಾರತಮ್ಯಗಳಿಗೆ ಒಳಗಾಗದಂತೆ ಪ್ರಾಥಮಿಕ ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಲು
3. ಇಲಾಖೆಗಳು ಮತ್ತು ಸ್ಥಳೀಯ ಸಂಸ್ಥೆ ಮತ್ತು ಪ್ರಾಧಿಕಾರದೊಂದಿಗೆ ಸಂಪರ್ಕ ಸಾಧನವಾಗಿ ಕಾರ್ಯ ನಿರ್ವಹಿಸಲು
4. ಶಿಕ್ಷಣ ಹಕ್ಕು ಕಾಯಿದೆಯ ಮಹತ್ವ ಮತ್ತು ಅನಿವಾರ್ಯತೆಯನ್ನು ಜನತೆಗೆ ಮನದಟ್ಟು ಮಾಡಲು
5. ಕಾಯಿದೆಯ ಆಶಯವನ್ನು ಜನರಿಗೆ ತಿಳಿಸುವ ಮತ್ತು ಪ್ರಕರಣಗಳ ತ್ವರಿತ ವಿಲೇವಾರಿಗಾಗಿ

## ಉದ್ದೇಶ :

1. ಮಕ್ಕಳ ಶಿಕ್ಷಣ ಹಕ್ಕು ಕಾಯಿದೆಯ ಜಾರಿಯನ್ನು ಸುಗಮಗೊಳಿಸುವುದು
2. ಶಿಕ್ಷಣ ಹಕ್ಕು ಕಾಯಿದೆಗೆ ಸಂಬಂಧಪಟ್ಟ ಪ್ರಕರಣಗಳನ್ನು ಸಂಬಂಧಪಟ್ಟ ವ್ಯವಸ್ಥೆಯ ಅಥವಾ ಪ್ರಾಧಿಕಾರದ ಮೂಲಕ ಪರಿಹಾರ ಕಂಡುಕೊಳ್ಳುವುದು
3. ಶೈಕ್ಷಣಿಕ ವಿಷಯಕ್ಕೆ ಸಂಬಂಧಪಟ್ಟ ಯಾವುದೇ ಕಾಯಿದೆ/ ಸುತ್ತೋಲೆ/ ಪರಾಮರ್ಶನ ಗ್ರಂಥಗಳ ನಿರ್ವಹಣೆ ಮಾಡುವುದು
4. ಸಮುದಾಯ ಮತ್ತು ಇಲಾಖೆಯು ಜಂಟಿಯಾಗಿ ಕಾರ್ಯನಿರ್ವಹಿಸುವುದು.

## ಚಟುವಟಿಕೆಗಳು :

- ಸಮುದಾಯಕ್ಕೆ ಮಾಹಿತಿ ಅರಿವು ಮೂಡಿಸುವುದು: ಸಮುದಾಯಕ್ಕೆ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆಯ ಬಗ್ಗೆ ಮತ್ತು ಕೋಶದ ಬಗ್ಗೆ ಅರಿವು ಮೂಡಿಸುವುದು.
- ದೂರು ಸಂಗ್ರಹ ಮತ್ತು ವಿಲೇವಾರಿ: ಮಕ್ಕಳ ಶಿಕ್ಷಣ ಹಕ್ಕು ಕಾಯಿದೆಯ ಪ್ರಕಾರ ಕಾಯಿದೆಗಳ ಉಲ್ಲಂಘನೆಗೆ ಸಂಬಂದಿಸಿದ ದೂರುಗಳನ್ನು ಸಂಗ್ರಹಿಸುವುದು ಮತ್ತು ಸೂಕ್ತ ಪ್ರಾಧಿಕಾರಗಳ ಮೂಲಕ ಪರಿಹರಿಸುವುದು. ಜಟಿಲ ಸಮಸ್ಯೆಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು.
- ಮಾಹಿತಿ ಸಂಗ್ರಹ:
- ಆಡಳಿತಾತ್ಮಕ ಸಭೆಗಳು
- ಮಾಸಿಕ/ತ್ರೈಮಾಸಿಕ/ ಅರ್ಧ ವಾರ್ಷಿಕ/ ವಾರ್ಷಿಕವಾಗಿ ಪರಿಶೀಲನೆ ಅನುಸರಣೆ
- ಇಲಾಖೆ ನೆಟ್‌ವರ್ಕ್‌ಗಳ ಜೊತೆ ಸಮಾಲೋಚನಾ ಸಭೆ
- ಕಾರ್ಯಾಗಾರಗಳು
- ದಾಖಲೀಕರಣ

## ಯಾರೆಲ್ಲ ಈ ಕೋಶದ ಪ್ರಯೋಜನ ಪಡೆದುಕೊಳ್ಳಬಹುದು?

- ಮಕ್ಕಳು
- ಪೋಷಕರು
- ಎಸ್.ಡಿ.ಎಂ.ಸಿ. ಸದಸ್ಯರು
- ಶಿಕ್ಷಕರು
- ಪಂಚಾಯತ್ ಸದಸ್ಯರು
- ಸ್ಥಳೀಯ ಸಮುದಾಯ

## ಯಾವೆಲ್ಲ ಸಂದರ್ಭಗಳಲ್ಲಿ ಈ ಕೋಶದ ಪ್ರಯೋಜನ ಪಡೆದುಕೊಳ್ಳಬಹುದು?

- ಶಿಕ್ಷಣ ಹಕ್ಕು ಕಾಯ್ದೆಯ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ಕಾಯಿದೆ ಬಗೆಗಿನ ಸ್ಪಷ್ಟತೆಗಾಗಿ
- ಇಲಾಖೆಗಳಲ್ಲಿ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಗಳ ಬಗೆಗಿನ ಮಾಹಿತಿಗಾಗಿ ಮತ್ತು ಕಾಯ್ದೆಗಳ ಬಗೆಗಿನ ಯಾವುದೇ ಸಂದೇಹವನ್ನು ಪರಿಹರಿಸಲು
- ಶಿಕ್ಷಣ ಹಕ್ಕು ಕಾಯ್ದೆಗಳ ಬಗ್ಗೆ ಪರಿಣಾಮಕಾರಿ ಅನುಷ್ಠಾನದಲ್ಲಿ ಉದ್ಭವಿಸುವ ಸಮಸ್ಯೆಗಳ ಪರಿಹಾರದ ಕುರಿತು ಮಾಹಿತಿಗಾಗಿ
- ಶಿಕ್ಷಣ ಹಕ್ಕು ಕಾಯ್ದೆಯ ಬಗೆಗಿನ ಸಾರ್ವಜನಿಕ ಕುಂದುಕೊರತೆಗಳ ನಿವಾರಿಸಲು
- ಇಲಾಖೆಗಳೊಂದಿನ ಸಮನ್ವಯತೆಗಾಗಿ

# ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನ ಕಾಯಿದೆ - 2009 ಮುಖ್ಯಾಂಶಗಳು

**ಸೆಕ್ಷನ್ 1 : ಕಿರು ಶೀರ್ಷಿಕೆ, ವ್ಯಾಪ್ತಿ ಮತ್ತು ಆರಂಭ**

2 (ಸಿ) "ಮಗು" ಎಂದರೆ 6 ರಿಂದ 14 ವರ್ಷದೊಳಗಿನ ಗಂಡು ಅಥವಾ ಹೆಣ್ಣು ಮಗು

2 (ಎಫ್) "ಎಲಿಮೆಂಟರಿ ಶಿಕ್ಷಣ" ಎಂದರೆ 1ನೇ ತರಗತಿಯಿಂದ 8ನೇ ತರಗತಿಯವರೆಗಿನ ಶಿಕ್ಷಣ.

2 (ಎಚ್) "ಸ್ಥಳೀಯ ಸರಕಾರ" ಎಂದರೆ ಯಾವುದೇ ನಗರ, ಪಟ್ಟಣ ಅಥವಾ ಹಳ್ಳಿಯ ಸ್ಥಳೀಯ ಆಡಳಿತ ನೋಡಿಕೊಳ್ಳುವ ಮುನಿಸಿಫಲ್ ನಗರ ಸಭೆ ಅಥವಾ ಮುನ್ಸಿಫಲ್ ಪುರಸಭೆ ಅಥವಾ ಜಿಲ್ಲಾ ಪರಿಷತ್ ಅಥವಾ ನಗರ ಪಂಚಾಯತ್ ಅಥವಾ ಪಂಚಾಯತಿ ಅಥವಾ ಇನ್ನಾವುದೇ ಹೆಸರಿನಿಂದ ಕರೆಯಲ್ಪಟ್ಟ ಆಡಳಿತ ವ್ಯವಸ್ಥೆ.

2 (ಐ) "ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗ" ಎಂದರೆ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗಗಳು ಕಾಯಿದೆ 2005ರ ಸೆಕ್ಷನ್ 3ರಂತೆ ರಚಿತವಾಗಿರುವ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗ.

**ಸೆಕ್ಷನ್ 3 : ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು**

- 6ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳೂ ತಮ್ಮ ನೆರೆಹೊರೆಯಲ್ಲೇ ಅವರ ಎಲಿಮೆಂಟರಿ ಶಿಕ್ಷಣವನ್ನು ಪೂರೈಸುವ ತನಕ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಹೊಂದುವ ಹಕ್ಕು ಹೊಂದಿರುವರು.

**ಸೆಕ್ಷನ್ 4 : ಶಾಲೆಗೆ ಸೇರಿಸಿಲ್ಲದ ಅಥವಾ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸದ ಮಕ್ಕಳಿಗೆ ವಿಶೇಷ ಅವಕಾಶಗಳು**

- 6 ವರ್ಷ ದಾಟಿದ ಯಾವುದಾದರೂ ಮಗುವನ್ನು ಶಾಲೆಗೆ ಸೇರಿಸಿಲ್ಲದಿದ್ದಲ್ಲಿ ಅಥವಾ ಶಾಲೆಗೆ ಸೇರಿಸಿದ್ದರೂ ಆ ಮಗುವಿಗೆ ಎಲಿಮೆಂಟರಿ ಶಿಕ್ಷಣವನ್ನು ಪೂರ್ಣಗೊಳಿಸಲಾಗದಿದ್ದ ಪಕ್ಷದಲ್ಲಿ ಅಂತಹ ಮಗುವನ್ನು ವಯಸ್ಸಿಗೆ ಸೂಕ್ತವಾದ ತರಗತಿಗೆ ಸೇರಿಸಬೇಕು.
- ಆದರೆ ಹೀಗೆ ಯಾವುದಾದರೂ ಮಗುವನ್ನು ನೇರವಾಗಿ ವಯಸ್ಸಿಗೆ ಅನುಗುಣವಾಗಿ ತರಗತಿಗೆ ಸೇರಿಸಿದ್ದ ಪಕ್ಷದಲ್ಲಿ, ಆ ಮಗುವನ್ನು ತನ್ನ ವಾರಿಗೆಯವರೊಂದಿಗೆ ಸಮಾನತೆ ಸಾಧಿಸಲು ನೆರವಾಗಲು ವಿಶೇಷವಾದ ತರಬೇತಿಯನ್ನು ನಿರ್ದಿಷ್ಟ ಸಮಯದಲ್ಲಿ ಹೊಂದುವಂತೆ ಶಿಫಾರಸು ಮಾಡಬಹುದು.

**ಸೆಕ್ಷನ್ 5 : ಬೇರೆ ಶಾಲೆಗೆ ವರ್ಗಾವಣೆ ಹೊಂದುವ ಹಕ್ಕು**

5 (1) ಯಾವುದಾದರೂ ಶಾಲೆಯಲ್ಲಿ ಮಕ್ಕಳಿಗೆ ಎಲಿಮೆಂಟರಿ ಶಿಕ್ಷಣವನ್ನು ಪೂರ್ಣಗೊಳಿಸಲು ಅವಕಾಶಗಳು ಇಲ್ಲದಿದ್ದ ಪಕ್ಷದಲ್ಲಿ ಸೆಕ್ಷನ್ 2ರ (ಎನ್)ರ ಉಪ - ಕ್ಲಾಸ್ (iii) ಮತ್ತು (iv)ರಲ್ಲಿ ಸೂಚಿಸಿರುವ ಶಾಲೆಗಳನ್ನು ಹೊರತುಪಡಿಸಿ ಇತರ ಶಾಲೆಗಳಿಗೆ ವರ್ಗಾವಣೆ ಹೊಂದಿ ತನ್ನ ಶಿಕ್ಷಣವನ್ನು ಮುಂದುವರಿಸಿ ಪ್ರಾಥಮಿಕ ಶಿಕ್ಷಣವನ್ನು ಪೂರೈಸುವ ಹಕ್ಕನ್ನು ಮಕ್ಕಳು ಹೊಂದಿರುತ್ತಾರೆ.

**ಸೆಕ್ಷನ್ 6 : ಶಾಲೆ ಸ್ಥಾಪಿಸಲು ಸಮುಚಿತ ಮತ್ತು ಸ್ಥಳೀಯ ಸರಕಾರದ ಜವಾಬ್ದಾರಿ**

ಈ ಕಾಯಿದೆಯಲ್ಲಿರುವ ಅವಕಾಶಗಳನ್ನು ಜಾರಿ ಮಾಡಲು ನೆರೆಹೊರೆಯಲ್ಲಿ ಶಾಲೆಗಳು ಇಲ್ಲದಿದ್ದ ಪಕ್ಷದಲ್ಲಿ ಈ ಕಾಯಿದೆಯು ಜಾರಿಯಾದ 3 ವರ್ಷಗಳಲ್ಲಿ ಸೂಕ್ತ ಸರಕಾರಗಳು ಅಥವಾ ಸ್ಥಳೀಯ ಸರಕಾರಗಳು ಈ ಕಾಯಿದೆಯಲ್ಲಿ ನಿರ್ದಿಷ್ಟವಾಗಿ ಸೂಚಿಸಿರಬಹುದಾದ ರೀತಿಯಲ್ಲಿ ಶಾಲೆಯನ್ನು ಆರಂಭಿಸಬೇಕು.

**ಸೆಕ್ಷನ್ 7 : ಸಂಪನ್ಮೂಲಗಳನ್ನು ಹಂಚಿಕೊಳ್ಳುವುದು ಮತ್ತಿತರ ಜವಾಬ್ದಾರಿಗಳು**

(1) ಈ ಕಾಯಿದೆಯಲ್ಲಿರುವ ಅವಕಾಶಗಳನ್ನು ಜಾರಿ ಮಾಡುವ ಜವಾಬ್ದಾರಿಯನ್ನು ನಿರ್ವಹಿಸಲು ಬೇಕಾದ ಹಣಕಾಸುಗಳನ್ನು ಒದಗಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಸಮಾನವಾದ ಜವಾಬ್ದಾರಿ ಇರುತ್ತದೆ.

**ಸೆಕ್ಷನ್ 8 : ಸಮುಚಿತ ಸರಕಾರದ ಜವಾಬ್ದಾರಿಗಳು.**

ಎ) ಪ್ರತಿಯೊಂದು ಮಗುವಿಗೆ ಉಚಿತ ಕಡ್ಡಾಯ ಎಲಿಮೆಂಟರಿ ಶಿಕ್ಷಣವನ್ನು ಒದಗಿಸುವುದು.

**ವಿವರಣೆ-ಉಚಿತ ಶಿಕ್ಷಣವೆಂದರೆ ಸಂಬಂಧಿತ ಸರಕಾರಕ್ಕೆ :-**

1. 6ರಿಂದ 14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುವ ಜವಾಬ್ದಾರಿಯಿದೆ.
2. 6ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳೂ ಕಡ್ಡಾಯವಾಗಿ ಶಾಲಾ ದಾಖಲಾತಿ ಹೊಂದುವ ಶಾಲೆಗೆ ಹಾಜರಾಗುವ ಮತ್ತು ಕಡ್ಡಾಯವಾಗಿ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪೂರೈಸುವುದನ್ನು ಖಾತರಿಗೊಳಿಸುವ ಜವಾಬ್ದಾರಿಯಿದೆ.

**ಸೆಕ್ಷನ್ 9 : ಸ್ಥಳೀಯ ಸರಕಾರದ ಜವಾಬ್ದಾರಿಗಳು**

ಪ್ರತಿಯೊಂದೂ ಸ್ಥಳೀಯ ಸರಕಾರವು,

ಎ) ಪ್ರತಿಯೊಂದು ಮಗುವಿಗೂ ಉಚಿತ ಮತ್ತು ಕಡ್ಡಾಯ ಎಲಿಮೆಂಟರಿ ಶಿಕ್ಷಣವನ್ನು ಒದಗಿಸಬೇಕು.

ಬಿ) ಸೆಕ್ಷನ್ 6ರಲ್ಲಿ ನಿದಿಷ್ಟಪಡಿಸಿರುವಂತೆ ನೆರೆಹೊರೆ ಶಾಲೆಗಳನ್ನು ಒದಗಿಸಬೇಕು.

ಡಿ) ತನ್ನ ಭೌಗೋಳಿಕ ಪ್ರದೇಶದಲ್ಲಿ ವಾಸವಾಗಿರುವ 6ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳ ವಿವರವನ್ನೂ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಇಟ್ಟುಕೊಳ್ಳಬೇಕು.